**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ**

**ಸಿ.ಸಿ.ನಂ.1747/2023**

ಫಿರ್ಯಾದುದಾರರು : ಶ್ರೀರಾಮ ಟ್ರಾನ್ಸಪೊರ್ಟ ಫೈನಾನ್ಸ್ ಕಂಪನಿ ಲಿ.

**ವಿರುದ್ಧ**

ಆಪಾದಿತ : ಧೋಪ ಸಿಂಗ್ ಮಹಿಪಾಲ.

**ಆಪಾದನೆ**

ಆಪಾದಿತನಾದ ನೀವು ಪಿರ್ಯಾದಿದಾರರಿಂದ TUSKERSUPER 2214 FBT-T ನೊಂದಾಣಿ ಸಂಖೆಃ AP-25-X-8838 ವಾಹನವನ್ನು ಖರೀದಿಸಲು ರೂ.5,20,234/- ಮೊತ್ತದ ಸಾಲದ ಕರಾರು ಮಾಡಿಕೊಂಡು ರೂ.3,66,000/- ಗಳನ್ನು ಸಾಲಪಡೆದಿದ್ದು, ಸದರಿ ಸಾಲವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತನಾದ ನೀವು ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡ, ಯಾದಗಿರಿ ಶಾಖೆಗೆ ಸೇರಿದ ಚೆಕ್ ನಂ.000005 ನೇದ್ದರಲ್ಲಿ ದಿನಾಂಕ 09.03.2023 ಎಂದು ಹಾಗೂ ರೂ.3,66,000/- ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ. ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಆಕ್ಸಿಸ್ ಬ್ಯಾಂಕ್, ಯಾದಗಿರಿ ಶಾಖೆಯ ಮೂಲಕ ದಿನಾಂಕ 17.03.2023 ರಂದು ಹಾಜರು ಪಡಿಸಿದಾಗ, **"Funds Insufficient"** ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **18.03.2023** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದಿದಾರರು ವಕೀಲರ ಮೂಲಕ ದಿನಾಂಕ 18-04-2023 ರಂದು ಆಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ದಿನಾಂಕ 27-04-2023 ರಂದು ಜಾರಿಯಾಗಿರುತ್ತದೆ. ಆದರೂ ನೀವು ಚೆಕ್ ನ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೆಗಳ ಲಿಖಿತ ಅಧಿನಿಯಮದ ಕಲಂ.138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ-1 : ನಿಮ್ಮ ಮೇಲೆ ಹೊರಿಸಲಾಗಿರುವ ಅಪಾದನೆಯನ್ನು ಕೇಳಿದ್ದಿರಾ?
ಅದು ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರಿ ಅಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿಚಾರಣೆ ನಡೆಯಬೇಕೆ?

ಉತ್ತರ :

( ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ)

ದಿನಾಂಕ : 21.12.2024.
ಸ್ಥಳ : ಯಾದಗಿರಿ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಯಾದಗಿರಿ.